ದಿನಾಂಕಃ 03/03/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರವಕೀಲರಾದ ಶ್ರೀ ಕೆ.ಕೆ.ಆರ್. ವಕೀಲರಿಂದಃ

ನನ್ನ ತಂದೆಯು 2010 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಜೊತೆ ಒಬ್ಬರು ಸಹೋದರು ಇದ್ದು ಅವರ ಹೆಸರು ಕರಿಯಪ್ಪ ಅಲಿಯಾಸ್ ಬಶೆಟ್ಟಿ ಆಗಿರುತ್ತದೆ. ನನ್ನ ತಂದೆ ಮತ್ತು ಆತನ ಸಹೋದರ ಬದುಕಿದ್ದಾಗಾ ಕುಟುಂಬದ ಆಸ್ತಿಯ ಸಂಬಂಧ ಪಾಲುಪಟ್ಟಿ ಮಾಡಿಕೊಂಡಿದ್ದರು. ಆ ಪಾಲುಪಟ್ಟಿಯ ಆಧಾರದ ಮೇಲೆ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಖಾತೆ ವಗೈರೆಗಳನ್ನು ಮಾಡಿಸಿಕೊಂಡಿರುವುದಿಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿಯ ಸಂಬಂಧ ನನ್ನ ಸಹೋದರು ಹಾಗೂ ನನಗೆ ಖಾತೆ ವಗೈರೆಗಳು ಬಂದಿರುವುದಿಲ್ಲ. ಪ್ರಸ್ತುತ ನಮ್ಮ ಪಿತ್ರಾರ್ಜಿತ ಆಸ್ತಿಗಳು ಜಂಟಿ ಖಾತೆಯಲ್ಲಿ ಇದೆ. ನಮ್ಮ ಕುಟುಂಬಕ್ಕೆ ಸುಮಾರು 10 ಎಕರೆ ಜಂಟಿ ಖಾತೆಯಲ್ಲಿ ಬರುತ್ತದೆ. ನನ್ನ ಸಹೋದರರು ತಂಬಾಕು ಸಂಸ್ಕರಣ ಘಟಕವನ್ನು ಹೊಂದಿರುತ್ತಾರೆ. ಒಂದು ತಂಬಾಕು ಸಂಸ್ಕರಣ ಘಟಕವನ್ನು ಹೊಂದಬೇಕಾದರೆ ಒಬ್ಬ ವ್ಯಕ್ತಿಯು 3 ಎಕರೆ ಜಮೀನು ಹೊಂದಬೇಕು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಹೋದರನಿಗೆ ಆತನ ಹೆಂಡತಿ ಕಡೆಯಿಂದ ಜಮೀನು ಬಂದಿರುತ್ತದೆ. ನನ್ನ ತಂದೆಯ ಹೆಸರಿನಲ್ಲಿ ಇರುವ ಜಂಟಿ ಖಾತೆಯನ್ನು ಉಪಯೋಗಿಸಿಕೊಂಡು ನನ್ನ ತಮ್ಮ ತೇಜು ಒಂದು ತಂಬಾಕು ಸಂಸ್ಕರಣ ಘಟಕವನ್ನು ಹೊಂದಿರುತ್ತಾನೆ. ತಂಬಾಕು ಸಂಸ್ಕರಣ ಘಟಕವನ್ನು ಹೊಂದಿರುವುದರಿಂದ ಜಮೀನಿನ ದಾಖಲೆಗಳ ಪರಿಶೀಲನೆಗಾಗಿ ತಂಬಾಕು ಸಂಸ್ಕರಣ ಕೇಂದ್ರಕ್ಕೆ ನೀಡಬೇಕು ಎಂದರೆ ಸರಿ. ನಮ್ಮ ತೇಜುಗೆ ನಾನು ಜಂಟಿ ಖಾತೆಗೆ ಸಹಿ ಮಾಡಿಕೊಟ್ಟಿರುವುದಿಲ್ಲ. ನನ್ನ ತಮ್ಮ ತೇಜು ಮತ್ತು ಆದಪ್ಪಶೆಟ್ಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳ ಆಧಾರದ ಮೇಲೆ ಅವರ ಹೆಸರಿನಲ್ಲಿ ಸಾಲಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಅನೂಸೂಚಿ ಸರ್ವೆ ನಂಬರ್ 139/1 2 ನೇ ಪ್ರತಿವಾದಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು 2 ನೇ ಪ್ರತಿವಾದಿಗೆ ಬರುವ ಮುನ್ನ ಆತನ ತಂದೆಯ ಹೆಸರಿನಲ್ಲಿ ಖಾತೆ.ವಗೈರೆಗಳು ಬರುತ್ತಿದ್ದವು ಎಂದರೆ ಸರಿಯಲ್ಲ. ಅನೂಸೂಚಿ ಆಸ್ತಿಗಳು 2 ನೇ ಪ್ರತಿವಾದಿಗೆ ಆತನ ತಂದೆಯ ಕುಟುಂಬದ ವಿಭಾಗದ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಇರುವ ಪಹಣಿಯನ್ನು ನಾವು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನೇಯನ್ನು ಮಾಡಿರುವುದಿಲ್ಲ. ಅದೇ ರೀತಿ 2 ನೇ ಪ್ರತಿವಾದಿಗೆ ಹಕ್ಕು ಬದಲಾವಣೆಯ ಮೂಲಕ ಖಾತೆ ಪಹಣಿ ಬಂದಿರುತ್ತದೆ, ಸಾಕ್ಷಿಯು ಮುಂದುವರೆದು ನನ್ನ ತಂದೆಯು ವಿದ್ಯಾಭ್ಯಾಸವನ್ನು ಮಾಡಿಲ್ಲದೇ ಇರುವುದರಿಂದ ಅವರು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ.

1 ನೇ ಪ್ರತಿವಾದಿ ಟಿ.ನಾಗರಾಜು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದು ನನಗೆ ಗೊತ್ತು. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ

ಹೆಸರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. 2 ನೇ ಪ್ರತಿವಾದಿಯು ಯಾವುದೇ ಸ್ಕೆಚ್ ಅನ್ನು ಪಡೆದುಕೊಳ್ಳದೇ 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. 2 ನೇ ಪ್ರತಿವಾದಿಯು ತಾನು ಮಾರಾಟ ಮಾಡುವ ಮೊದಲು ಹಳ್ಳಿಮೈಸೂರು ಎಸ್.ಬಿ.ಐ. ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಮೋಸದಿಂದ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ದಿನಾಂಕಃ 01.06.2016 ರಂದು ಶುದ್ಧ ಕ್ರಯಪತ್ರವನ್ನು ಮಾಡಿರುತ್ತಾರೆ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ನೀಡಿ ಮುಂದೂಡಲಾಯಿತು)

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ